ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

# ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.

ಸಂಖ್ಯೆ: ಆರ್‌ಎಸ್‌ಆರ್/ಎಕ್ಸ್‌ಎಂಸಿ/92/2017-18 ದಿನಾಂಕ:3 -11-2017

ಸುತ್ತೋಲೆ ಸಂಖ್ಯೆ:- 265

ವಿಷಯ:- ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960 ರ ನಿಯಮ 18(4) ರಡಿ ವಯೋ ನಿವೃತ್ತಿ ಹೊಂದಿದ ನೌಕರರು ಸಹಕಾರ ಸಂಘಗಳಲ್ಲಿ ಸೇವೆ ಸಲ್ಲಿಸುತ್ತಿರುವ ಬಗ್ಗೆ.

ಉಲ್ಲೇಖ:- ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಒ 123 ಸಿಎಲ್‌ಎಂ 2016, ದಿನಾಂಕ: 29-7-2017.

---

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿ ನೋಂದಣಿಗೊಂಡ ರಾಜ್ಯದಲ್ಲಿ ಸಹಕಾರ ಸಂಘಗಳು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960 ರ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸುವುದು ಅಪೇಕ್ಷಣೀಯ.

ಅದರಂತೆ, ರಾಜ್ಯದಲ್ಲಿ ಸಹಕಾರ ಸಂಘಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ವಯೋ ನಿವೃತ್ತಿ ವಯಸ್ಸು, ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960 ರ ನಿಯಮ 18(4) ರ ಪ್ರಕಾರ 60 ವರ್ಷ ಆಗಿದೆ. ಅಂದರೆ, ಯಾವುದೇ ಸಹಕಾರ ಸಂಘಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು 60 ವರ್ಷ ವಯಸ್ಸು ಮೀರಿದಲ್ಲಿ ವಯೋನಿವೃತ್ತಿ ಹೊಂದಬೇಕಾಗುತ್ತದೆ.

ಆದರೆ, ಕೆಲವು ಸಹಕಾರ ಸಂಘ ಸಂಸ್ಥೆಗಳು ಇವುಗಳನ್ನು ಪಾಲಿಸದೇ 60 ವರ್ಷ ವಯಸ್ಸು ಮೀರಿ ವಯೋ ನಿವೃತ್ತಿ ನಂತರವೂ ಸೇವೆ ಮುಂದುವರೆಸಿರುವ ಪ್ರಕರಣಗಳು ಈ ಕಛೇರಿಯ ಗಮನಕ್ಕೆ ಬಂದಿದೆ.

ಯಾವುದೇ ಸಹಕಾರ ಸಂಘಗಳಲ್ಲಿ ವಯೋ ನಿವೃತ್ತಿ ನೌಕರರನ್ನು ನೇಮಿಸಿಕೊಂಡಲ್ಲಿ ತಕ್ಷಣ ಅಂತಹ ಸಿಬ್ಬಂದಿಯನ್ನು ಸೇವೆಯಿಂದ ಬಿಡುಗಡೆಗೊಳಿಸಿ ನಿಯಮ ಪಾಲಿಸತಕ್ಕದ್ದು. ತಪ್ಪಿದಲ್ಲಿ ಆ ರೀತಿ ನೇಮಕಾತಿ ಮಾಡಿಕೊಂಡ ಪದಾಧಿಕಾರಿ/ಆಡಳಿತ ಮಂಡಲಿಯ ಸದಸ್ಯರ ವಿರುದ್ಧ ಕಾನೂನು ಕ್ರಮ ಜರುಗಿಸುವುದಲ್ಲದೆ

ನಿವೃತ್ತಿಗೊಂಡ ಸಿಬ್ಬಂದಿಗೆ ಪಾವತಿಯಾದ ಮೊತ್ತವನ್ನು ಸಂಬಂಧಿಸಿದ ಸಂಸ್ಥೆಯ ಪದಾಧಿಕಾರಿಗಳು/ಆಡಳಿತ ಮಂಡಲಿಯ ಸದಸ್ಯರಿಂದ ವಸೂಲಿ ಮಾಡಲಾಗುವುದು.

ಈ ಮೇಲಿನ ಸೂಚನೆಗಳನ್ನು ಯಥಾವತ್ತಾಗಿ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

ಸಂಖ್ಯೆ:ಪಬ್ಯಾಮ: 414 :2017-18 ದಿನಾಂಕ:21.11.2017

ಗೆ,

**ಅಧ್ಯಕ್ಷರು / ಮುಖ್ಯಕಾರ್ಯನಿರ್ವಹಣಾಧಿಕಾರಿಗಳು**
**ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳಿಗೆ,**

ತಮ್ಮ ವಿಶ್ವಾಸಿ,

(ಪುಂಡಲೀಕ ಎನ್.ಕೇರೂರೆ)
ಮುಖ್ಯಕಾರ್ಯನಿರ್ವಹಣಾಧಿಕಾರಿ